## ಆಕರ್ಷಕ 'ಥಟ್ ಅಂತ ಹೇಳಿ'

ಹಾಸನದಲ್ಲಿ ನಡೆಯುತ್ತಿರುವ 'ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನ'ದ ಅಂಗವಾಗಿ 'ಥಟ್' ಅಂತ ಹೇಳಿ' ತಂಡ ನಡೆಸುತ್ತಿರುವ ವಿಶೇಷ ಕಾರ್ಯಕ್ರಮ ಚೆನ್ನಾಗಿ ಮೂಡಿ ಬರುತ್ತಿದೆ. ಪ್ರತಿದಿನ ರಾತ್ರಿ 9.30ಕ್ಕೆ ಇದನ್ನು ನೋಡಲು ಅವಕಾಶ ಕಲ್ಪಿಸಿದ ಚಂದನ ವಾಹಿನಿಯ ಕಾರ್ಯ ಸಂತಸವನ್ನು ತಂದಿದೆ.

—ಸುಂದರ್, ಬೆಂಗಳೂರು

## ಹೋಳಿಗೆ ತಿಂದ ಮೇಲೆ...?

ಹೋಳಿಗೆ ತಿಂದ ಮೇಲೆ ಬೇರೇನೂ ರುಚಿಸದು. ಅದರಂತೆ ಮೂರನೇ 'ವೀಕ್ ಎಂಡ್ ವಿತ್ ರಮೇಶ್, ಕಾರ್ಯಕ್ರಮದ ಪ್ರಾರಂಭದ ದಿನವೇ ನಟ ಪ್ರಕಾಶ್ ರೈ ನಡೆದು ಬಂದ ದಾರಿ ಹೋಳಿಗೆ ತಿಂದಷ್ಟೇ ಸಂತೋಷವಾಯಿತು. ಇನ್ನು ಮುಂಬರುವ ಕಾರ್ಯಕ್ರಮ ರುಚಿಸದೆ ಹೋಗಬಹುದು.

ಪ್ರಾರಂಭದಲ್ಲೇ ಪ್ರಬುದ್ಧ ವ್ಯಕ್ತಿತ್ವದ ಪ್ರತಿಭೆಯನ್ನು ಅನಾವರಣಗೊಳಿಸಿದೆ. ಮೇರುನಟನ ಸಂದರ್ಶನ ಅಮೋಘ.

—ವರಲಕ್ಷ್ಮಿ ಮುಕುಂದರಾವ್, ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಮೂರ್ಖತನದ ಪರಮಾವಧಿ

ಸಿಂಧೂರ ಧಾರಾವಾಹಿ ಮೂರ್ಖತನದ ಪರಮಾವಧಿ ಎಂದರೆ ತಪ್ಪಾಗಲಾರದು. ನಾಯಕಿ ಒಬ್ಬ ಡಿಸೈನರ್. ಅವಳಿಗೆ ಒಬ್ಬ ಹೆಸರಾಂತ ಸಿ.ಇ.ಓ. ಪರಿಚಯವಾಗುತ್ತದೆ. ಕಾರಣವೇ ಇಲ್ಲದೆ ಸಿಇಓ ನಾಯಕಿಯ ಮೇಲೆ ಹಗೆ ಸಾಧಿಸುತ್ತಾಳೆ. ಸಹಾಯಕ ಮೂರ್ತಿ ಜೊತೆ ಚರ್ಚಿಸುವುದು. ಅವಳನ್ನು ಅವಮಾನಿಸಲು ಯೋಚಿಸುವುದು. ಕಂಪೆನಿಯ ಸಿ.ಇ.ಓ.ಗೆ ಮಾಡಲು ಬೇರೆ ಕೆಲಸವಿಲ್ಲವೆ? ಬಡಪಾಯಿ ವೀಕ್ಷಕರು ಇದನ್ನೆಲ್ಲ ಸಹಿಸಿಕೊಳ್ಳಬೇಕು. ಕಥೆಗಳಲ್ಲಿ ಇಂತಹ ಅಸಂಬದ್ಧವಾದ ಸನ್ನಿವೇಶಗಳನ್ನು ತೋರಿಸಬೇಡಿ. ಕಥೆಯೇ ಇಲ್ಲ ಎಂದ ಮೇಲೆ ಧಾರಾವಾಹಿಗಳನ್ನು ಮಾಡಬೇಡಿ.

— ಎನ್.ಎಸ್. ಚಂದ್ರಶೇಖರ್, ಬೆಂಗಳೂರು

ವಾರದ ಪತ್ರ

## ವೃತ್ತಿ ಅವಹೇಳನ ಆಗದಿರಲಿ

ರೋಗಿಗಳ ಪ್ರಾಣ ಕಾಪಾಡುವ ವೈದ್ಯ– ವೈದ್ಯೆಯರು, ಜನರಿಗೆ ರಕ್ಷಣೆ ನೀಡುವ ಆರಕ್ಷಕರು, ಅನೇಕ ಧಾರಾವಾಹಿಗಳಲ್ಲಿ ಖಳನಾಯಕಿಯ ಕೈಗೊಂಬೆಗಳಾಗುತ್ತಾರೆ. ಖಳನಾಯಕಿಯ ಒಂದು ಫೋನ್ ಕರೆಗೆ ತಮ್ಮ ವೃತ್ತಿ ಧರ್ಮ ಮರೆತು, ಹೊಟ್ಟೆಯಲ್ಲಿರುವ ಮಗುವನ್ನು ಮಟಾಷ್ ಮಾಡುತ್ತಾರೆ. ಸುಳ್ಳು ವರದಿಗಳನ್ನು ಕೊಡುತ್ತಾರೆ. ಇನ್ನು ದಾದಿಯರಂತೇ ರೋಗಿಗಳ ಆಕ್ಸಿಜನ್ ನಳಿಕೆ ಕಿತ್ತು ಹಾಕಲು ತುದಿಗಾಲಲ್ಲಿ ನಿಂತಿರುತ್ತಾರೆ. ಅನೇಕ ಧಾರಾವಾಹಿಗಳಲ್ಲಿ ಆರಕ್ಷಕರಂತೂ ಬುದ್ಧಿಯೇ ಇಲ್ಲದವರು., ಬಫೂನ್‌ಗಳು. ಹತ್ತಾರು ಕೆಟ್ಟ ಕೆಲಸಗಳನ್ನು ಮಾಡಿದರೂ, ಖಳನಾಯಕಿಯರ ಮೊಬೈಲ್ ಸಂಭಾಷಣೆಯನ್ನು ಅಪ್ಪಿ ತಪ್ಪಿಯೂ ಟ್ಯಾಪ್ ಮಾಡಿ ಕೇಳಿ ಅವರನ್ನು ಹಿಡಿಯುವುದಿಲ್ಲ.

ಇಂತಹ ಧಾರಾವಾಹಿಗಳನ್ನು ನೋಡಿಯೂ ವೈದ್ಯರ ಸಂಘವಾಗಲೀ, ಆರಕ್ಷಕರಾಗಲಿ ಒಮ್ಮೆಯೂ ವಿರೋಧಿಸದೆ ಇರುವುದು, ನಿರ್ದೇಶಕರು ಪದೇ ಪದೇ ಇಂತಹ ದೃಶ್ಯಗಳನ್ನೇ ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ.

—ಇಂದು, ತಿಪಟೂರು

## ಹೃದಯ ತಣಿಸುವ ಹೊಸ ತಾನ...

ಮಧುರ ಮಧುರವೀ ಮಂಜುಳಗಾನ ಇತ್ತೀಚೆಗೆ ಹೃದಯ ತಣಿಸುತ್ತಿಲ್ಲ. ಮಹೇಶ ಜೋಷಿ ಅವರು ಜಾಹೀರಾತಿನಲ್ಲಿ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹ ಎಂದು ಹೇಳುತ್ತಾರೆ. ಆದರೆ ಆ ಪ್ರೋತ್ಸಾಹವೂ ಚೆನ್ನಾಗಿರಬೇಕು. ಪ್ರತಿಭೆ ಇರುವವರನ್ನು ಆರಿಸಬೇಕು. ವೀಕ್ಷಕರೂ ಕಾರ್ಯಕ್ರಮ ನೋಡುವಂತಿರಬೇಕು. ನನ್ನ ಪ್ರಕಾರ ಈ ಕಾರ್ಯಕ್ರಮ ಶುರುವಾಗಿ 8–10 ವರುಷಗಳಾಗಿರಬಹುದು. ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ಎಂದು ಹೇಳುವ ಮಹೇಶ್ ಜೋಷಿಯವರು ಎಲ್ಲಾ ಕಾರ್ಯಕ್ರಮಗಳಲ್ಲೂ ತಾವೇ ಒಂದೆರಡು ಹಾಡುಗಳನ್ನು ಹಾಡುತ್ತಾರೆ. ಇದರಿಂದ ನೂರಾರು ಪ್ರತಿಭೆಗಳ ಅವಕಾಶವನ್ನು ಇವರು ಕಿತ್ತುಕೊಂಡಿದ್ದಾರೆ. ತಮ್ಮ ಪ್ರತಿಭೆಯನ್ನು ತೋರಿಸುವುದಕ್ಕೆ ಈ ಕಾರ್ಯಕ್ರಮ ಮಾಡುತ್ತಿದ್ದಾರೆ ಎನಿಸುತ್ತದೆ.

—ವೀಣಾಶಂಕರ್, ಬೆಂಗಳೂರು

## ಗೋಳು ಕೇಳೋರು ಯಾರು?

ಉದಯ ಟಿವಿಯ 'ಅರಮನೆ' ಧಾರಾವಾಹಿ ಚೆನ್ನಾಗಿ ಮೂಡಿಬರ್ತಿದೆ. ಆದರೆ ಈ ಧಾರಾವಾಹಿಯಲ್ಲಿ ಪಾತ್ರ ಮಾಡಿರುವ 'ಹಿತ'ಳ ಪಾತ್ರಧಾರಿ ಸ್ವಲ್ಪ ಜಾಸ್ತಿ ಓವರ್ ಆಕ್ಟಿಂಗ್ ಮಾಡ್ತಾಳೆ, ಅವಳು ತನ್ನ ಗುಣ ತಿದ್ದಿಕೊಳ್ಳಲಿ. ಅವಿನಾಶ್‌ಗೆ ಹಿತ ಇಷ್ಟವಿಲ್ಲದಿದ್ದರೂ ಅವನ ಹಿಂದೆಯೇ ಸುತ್ತಾಡುತ್ತಾ ಬಿದ್ದಿರ್ತಾಳೇಕೆ?

— ಮೃದುಲ ಶಿವಕುಮಾರ್, ಥಾಣಾ

## ರಂಗ ಗೌರವ ಸಲ್ಲಬೇಕಿತ್ತು

ಇತ್ತೀಚೆಗೆ ಹಿರಿಯ ನಟಿ ಪದ್ಮ ಕುಮುಟ 'ಝೀ' ಟಿವಿಯಲ್ಲಿ ಪ್ರಸಾರವಾಗುತ್ತಿರುವ 'ಮಹಾನದಿ' ಧಾರಾವಾಹಿಯ ಚಿತ್ರೀಕರಣದ ಸಂದರ್ಭದಲ್ಲೇ ಹೃದಯಾಘಾತದಿಂದ ನಿಧನ ಹೊಂದಿದರು.

ನಿಧನ ಹೊಂದಿದ ಹಿರಿಯ ನಟಿಗೆ ವಾಹಿನಿಯವರಾಗಲೀ ಅಥವಾ ಆ ಧಾರಾವಾಹಿಯ ತಂಡದವರಾಗಲೀ ಒಂದು ಶ್ರದ್ಧಾಂಜಲಿಯನ್ನು ಅರ್ಪಿಸದೆ ಇರುವುದು ಖೇದದ ಸಂಗತಿ. ಆಕೆ ನಿಧನ ಹೊಂದಿದ ಒಂದು ವಾರದ ತನಕ ಆಕೆ ಪಾತ್ರ ನಿರ್ವಹಿಸಿದ್ದ ಸಂಚಿಕೆಗಳು ಪ್ರಸಾರಗೊಂಡಿದ್ದವು. ಆ ಸಂದರ್ಭದಲ್ಲಿ ಹಿರಿಯ ಜೀವಕ್ಕೊಂದು ಟಿವಿಯಲ್ಲಿ ಶ್ರದ್ಧಾಂಜಲಿ ಅರ್ಪಣೆ ಮಾಡಬಹುದಾಗಿತ್ತು.

— ಎಸ್.ಎಸ್. ಮಧುಸೂಧನ ಮೂರ್ತಿ

## ಸ್ಲೋ ಪಾಯ್ಸನ್

ಪ್ರತಿ ಶುಕ್ರವಾರ ರಾತ್ರಿ 8.30ಕ್ಕೆ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಕವರ್ ಸ್ಟೋರಿ ವೀಕ್ಷಕರನ್ನು ಬೆಚ್ಚಿ ಬೀಳಿಸುವುದಲ್ಲದೆ ನಾವೆಂತಹ ಅಮಾಯಕರು ಎನಿಸುತ್ತದೆ. ನಮಗೆ ಪರೋಕ್ಷವಾಗಿ ಆಹಾರ, ತರಕಾರಿ, ಹಣ್ಣುಗಳು, ವಿವಿಧ ಪಾನೀಯಗಳು ಪ್ರತಿಯೊಂದರಲ್ಲೂ ವಿಷ ಬೆರೆಸುತ್ತಿರುವ (ಸ್ಲೋ ಪಾಯ್ಸನ್) ವ್ಯಕ್ತಿಗಳಿಗೆ ಶಿಕ್ಷೆ ಇಲ್ಲವೇ?

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ನಿಯಂತ್ರಣ ಅವಶ್ಯ

ಕಿರುತೆರೆಯ ಧಾರಾವಾಹಿಗಳನ್ನು ಕಾರಣಾಂತರಗಳಿಂದಲೋ ಅಥವಾ ಹೊತ್ತುಕಳೆಯಲೆಂದೋ ವೀಕ್ಷಿಸುವಂತಹ ದರ್ದು ನಾಗರಿಕರಿಗಿದೆ. ಅವುಗಳ ಕಥಾಹಂದರ – ಚಿತ್ರಣ ಅವಾಸ್ತವಿಕತೆಯ ಆಗರ ಎಂಬ ಹಕೀಕತ್ತೂ ಗೊತ್ತು; ಬಕ್ವಾಸು ಎಂತಲೂ ಗೊತ್ತು . ಗಂಭೀರವಾಗಿ ಪರಿಗಣಿಸಲಾಗದು. ಆದರೆ ದೃಶ್ಯ ಮಾಧ್ಯಮದ ದಾಸ್ಯತ್ವಕ್ಕೆ ಒಳಗಾದ ಇಂದಿನ ಯುವಪೀಳಿಗೆಗೆ ಅದರೊಳಗಿನ ಹುಳುಕನ್ನು ಪರಿಗಣಿಸುವಷ್ಟು ವ್ಯವಧಾನ ಎಲ್ಲಿದೆ? ಬದಲಾದ ಕಾಲಘಟ್ಟಕ್ಕೆ ಅದೇ ಸರಿ ಎಂದು ಅನುಕರಿಸಿ ಅನುಕರಿಸುತ್ತ ಅಧಃಪತನದ ಹಾದಿ ಹಿಡಿದು ನಾಶವಾಗಲೊಂದು ಮಾರ್ಗವಷ್ಟೆ.

ಅನೇಕ ಚಾನೆಲ್‌ಗಳು ರಾಗ ದ್ವೇಷಗಳನ್ನು ಬಿತ್ತುವ, ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದನ್ನು ಸಾರುವ ಹುರುಳಿಲ್ಲದ ಕಥಾ ಹಂದರವನ್ನೇ ಮೂಲ ಮಂತ್ರವಾಗಿಸಿ ಝಣ ಝಣ ಕಾಂಚಾಣ ಎಣಿಸುತ್ತ ರಾಜಾರೋಷವಾಗಿ ಮೆರೆಯುತ್ತಿರುವಾಗ ಸಂಬಂಧಪಟ್ಟ ಪ್ರಸಾರ ಇಲಾಖೆಗಳು ಕ್ರಮ ಕೈಗೊಳ್ಳದೇ ಇರುವುದು ಖಂಡನೀಯ.

-ಲತಾ ಹೆಗಡೆ, ಹುಬ್ಬಳ್ಳಿ